ನೋವಾಗಿದೆ. ಕರ್ನಾಟಕ ಹಿತ, ಕಾವೇರಿ ಹಿತ, ಹಾಗೂ ಕೃಷ್ಣಾದ ಹಿತವನ್ನು ಕಾಪಾಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ.

(ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಉಪಮುಖ್ಯಮಂತ್ರಿಗಳಿಗೆ, ನೇರವಾಗಿ ಮತ್ತು ಸ್ಪಷ್ಟವಾಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮಾನ್ಯ ಶುಕ್ಲಾರವರ ಹೇಳಿಕೆಗಳು, ವರ್ತನೆ, ನಮ್ಮ ರಾಜ್ಯದ ವಿರುದ್ಧ ಎಂಬ ವಿಚಾರದಲ್ಲಿ ಯಾವುದೇ ಅನುಮಾನ ಇಲ್ಲ. ಇದನ್ನು ಅವರೂ ಒಪ್ಪಿಕೊಳ್ಳುತ್ತಾರೆ ಇಲ್ಲವೇ ಮನಸ್ಸಿನಲ್ಲಾದರೂ ಒಪ್ಪಿಕೊಳ್ಳುತ್ತಾರೆ. ಹಾಗಾಗಿ ಅವರ ವಿರುದ್ಧ ಒಂದು ಖಂಡನೆ ಮಾಡುವುದಕ್ಕೆ ಏನು ಕಷ್ಟವಾಗುತ್ತಿದೆ, ಒಂದು ನಿರ್ಣಯ ಮಾಡುವುದಕ್ಕೆ ಏನು ಕಷ್ಟವಾಗುತ್ತಾ ಇದೆ. ಇವತ್ತು ಮಾನಿಟರಿಂಗ್ ಕಮಿಟಿ ಮಾಡಬೇಡಿ ಎಂದು ಒಂದು ನಿರ್ಣಯ ಮಾಡುವುದಕ್ಕೆ ಏನು ತೊಂದರೆ ಇದೆ? ಲೋಕಸಭೆಯಲ್ಲಿ ಮಾನ್ಯ ತುಂಗನ್‌ರವರು ಹೇಳಿಕೆ ಕೊಟ್ಟಿದ್ದಾರೆಂದು ಹೇಳಿದರು. ಕೇಂದ್ರಸರ್ಕಾರ ಯಾವಾಗ, ಕರ್ನಾಟಕ ಸರ್ಕಾರದ ಮೇಲೆ ಮಲತಾಯಿಧೋರಣೆ ಮಾಡುತ್ತದೆ, ಆಗ ಸರ್ಕಾರದ ನೀತಿ ಸ್ಪಷ್ಟವಾಗಿರಬೇಕಾಗುತ್ತದೆ. ಹಾಗಾಗಿ ನಾನು ಸ್ಪಷ್ಟವಾಗಿ ಕೇಳುತ್ತೇನೆ. ಖಂಡನಾ ನಿರ್ಣಯ ಮಾಡುವುದಕ್ಕೆ ಏನು ಕಷ್ಟ, ಕೇಂದ್ರಸರ್ಕಾರ ಮಾನಿಟರಿಂಗ್ ಕಮಿಟಿ ಮಾಡಿದರೂ ಸಹ ನಾವು ಒಪ್ಪುವುದಿಲ್ಲ, ಹಾಗೂ ಮಾಡಿದ್ದನ್ನು, physically we will stop it ಎಂದು ಹೇಳುವುದಕ್ಕೆ ಏನು ತೊಂದರೆ, ಕಷ್ಟ ಎಂಬುದನ್ನು ತಮ್ಮನ್ನು ಕೇಳುತ್ತೇನೆ.

ಶ್ರೀ ಸಿ.ಬೈರೇಗೌಡ :- ನಾನು ಗುರುತರವಾದ ಪ್ರಶ್ನೆ ಕೇಳಿದೆ, ಅದಕ್ಕೆ ಉತ್ತರವನ್ನು ಕೊಡಲಿಲ್ಲ. ಅವರು ಉತ್ತರವನ್ನು ಕೊಡುವುದಕ್ಕೆ ಪ್ರಯತ್ನಪಟ್ಟರು; ಆಷ್ಟರೊಳಗೆ ನಮ್ಮ ಸ್ನೇಹಿತರು ಯಾರೋ ಮಾತನಾಡಲು ಎದ್ದರು. ಈ ಸದನದಲ್ಲಿ ಆದ ತೀರ್ಮಾನಕ್ಕೆ ಸರ್ಕಾರ ಬದ್ಧವೇ ಅಲ್ಲವೇ ಎಂಬುದನ್ನು ದಯಮಾಡಿ ಹೇಳಿ. ಇಲ್ಲಿಯೂ ತೀರ್ಮಾನವಾಗಿದೆ, ವಿಧಾನ ಪರಿಷತ್ತಿನಲ್ಲೂ ಕೂಡ ತೀರ್ಮಾನವಾಗಿದೆ. ಮಧ್ಯಂತರ ಆಜ್ಞೆಯನ್ನು ನಾವು ತಿರಸ್ಕರಿಸಿದ್ದೇವೆ ಎಂದು ಸ್ಪಷ್ಟವಾಗಿ ತೀರ್ಮಾನವಾಗಿರುವುದಕ್ಕೆ ಈಗಲೂ ಸರ್ಕಾರ ಬದ್ಧವೇ ಇಲ್ಲವೇ ಎನ್ನುವುದನ್ನು ಹೇಳಬೇಕು. ಆ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿದ್ದರೆ, ಆ ತೀರ್ಮಾನದ ಆಧಾರದ ಮೇಲೆ, ಕೇಂದ್ರ ಸರ್ಕಾರವಾಗಲೀ, ಯಾವುದೇ ಸರ್ಕಾರವಾಗಲೀ, ಏನೇ ಕ್ರಮ ತೆಗೆದುಕೊಂಡರೂ, ರಾಜ್ಯ ಸರ್ಕಾರ ಅದಕ್ಕೆ ಬದ್ಧವಾಗಿರುವುದಿಲ್ಲ ಎನ್ನತಕ್ಕಂತಾದ್ದನ್ನು ಸ್ಪಷ್ಟ ಪದಗಳಲ್ಲಿ ಹೇಳಿ.

ಶ್ರೀ ಹೆಚ್. ಏಕಾಂತಯ್ಯ :- ಸನ್ಮಾನ್ಯ ಅಧ್ಯಕ್ಷರೇ, ನ್ಯಾಯಾಧಿಕರಣದ ಮಧ್ಯಂತರ ಆಜ್ಞೆಯ ಪ್ರಕಾರ, ನೀರನ್ನು ಬಿಡುವ ವಿಚಾರದಲ್ಲಿ, ಉಸ್ತುವಾರಿ ಸಮಿತಿಯನ್ನು ನೇಮಕ ಮಾಡಲಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದಕ್ಕೆ ನಮ್ಮ ರಾಜ್ಯಸರ್ಕಾರದವರು ನಾವು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಇದು ಕೇವಲ ರಾಜ್ಯಸರ್ಕಾರದ ಹೊಣೆಯಲ್ಲ. ಇಡೀ ಶಾಸನ ಸಭೆ, ಹಿಂದೆ ಇಂತಹ ವಿಚಾರಗಳು ಬಂದಾಗ, ಒಂದು ನಿರ್ಣಯದ ಮುಖಾಂತರ ನಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೇವೆ. ಆದ್ದರಿಂದ, ನಾನು ಉಪಮುಖ್ಯಮಂತ್ರಿಗಳನ್ನು ಕೇಳುವುದು, ಸರ್ಕಾರದ ನಿಲುವಿನ ಬಗ್ಗೆ ತಾವೇನು ಹೇಳುತ್ತೀರಿ, ಅದನ್ನು ಈ ಶಾಸನ ಸಭೆಯ ನಿರ್ಣಯದ ಮುಖಾಂತರ ಏತಕ್ಕೋಸ್ಕರ ದೃಢೀಕರಿಸಬಾರದು, ಏತಕ್ಕೋಸ್ಕರ ಸರ್ಕಾರ ಇದಕ್ಕೆ ವಿರೋಧವಾಗಿದೆ ಎನ್ನುವ ಬಗ್ಗೆ ನನಗೆ ಹೇಳಬೇಕು.